ಇಟ್ಟುಕೊಳ್ಳಿ.

ನಿಗದಿಪಡಿಸಿರುವ ಸಾಗಣೆಕಾರರನ್ನು ಮನೆಗೆ ಕರೆಸಿ ತೋರಿಸಿ; ಅವರು ಸಾಗಣೆ ಮಾಡಬೇಕಾಗಿರುವ ಸಾಮಾನುಗಳ ಸ್ವಭಾವ/ಪ್ರಮಾಣವನ್ನು ಪರಿಶೀಲಿಸಿ ಅದಕ್ಕೆ ಶುಲ್ಕವನ್ನು ನಿಗದಿ ಪಡಿಸುತ್ತಾರೆ, ಚೌಕಾಶಿ ಮಾಡಿ ಅದನ್ನು ಅಂತಿಮಗೊಳಿಸಿ.

## ಯೋಜನೆಯ ಹಂತ:

ಇದು ನಮಗೆ ತುಂಬಾ ಸ್ವಾರಸ್ಯಕರ ಹಂತ!

ನಿಮ್ಮ ಮನೆಯಲ್ಲಿನ ಎಲ್ಲಾ ವಸ್ತುಗಳನ್ನು ಕೊಠಡಿಗಳಿಗೆ ಅನುಗುಣವಾಗಿ ಒಂದು ಪಟ್ಟಿ ಮಾಡಿ. ಪ್ರತಿ ವಸ್ತುವಿಗೆ ಒಂದು ಸಂಖ್ಯೆಯನ್ನು ನೀಡಿ. ಅನುಕೂಲಕ್ಕಾಗಿ ಚಿಕ್ಕಪುಟ್ಟ ವಸ್ತುಗಳನ್ನು ಕಡೆಗಣಿಸಬಹುದು. ಆದರೆ ಚಿಕ್ಕ ವಸ್ತುಗಳ ದೊಡ್ಡ ಗುಂಪನ್ನು ಮಾಡಿ ನಿಮ್ಮ ಪಟ್ಟಿಯಲ್ಲಿ ಸೇರಿಸಿ, ಅದಕ್ಕೂ ಒಂದು ಸಂಖ್ಯೆ ಕೊಡಿ. ಉದಾಃ ಪಾಪುವಿನ ಬಟ್ಟೆಗಳು, ಆಟದ ಸಾಮಾನು ಇತ್ಯಾದಿ.

ನೀವು ಹೋಗುತ್ತಿರುವ ಹೊಸ ಮನೆಯ ವಿನ್ಯಾಸವನ್ನು ಒಂದು ಎ4 ಸೈಜಿನ ಹಾಳೆಯ ಮೇಲೆ ರಚಿಸಿ. ಇದು ಇಂಜಿನಿಯರರ ಬ್ಲೂಪ್ರಿಂಟ್ ಆಗಿರಬೇಕಾಗಿಲ್ಲ. 'ಕಾಮ್–ಚಲಾವ್ ನಕ್ಷೆ'ಯಾದರೆ ಸಾಕು.

ಯಾವ ವಸ್ತು ಹೊಸ ಮನೆಯಲ್ಲಿ ಎಲ್ಲೆಲ್ಲಿ ಜೋಡಿಸಿಕೊಳ್ಳಬಹುದು ಎಂಬುದನ್ನು ಚರ್ಚಿಸಿ ಈ ನಕ್ಷೆಯ ಮೇಲೆ ಟಿಪ್ಪಣಿ ಮಾಡಿಕೊಳ್ಳಿ. ಆಯಾ ಜಾಗದಲ್ಲಿ ನೀವು ವಸ್ತುವಿಗೆ ಕೊಟ್ಟಿರುವ ಸಂಖ್ಯೆಯನ್ನು ಬರೆದರಾಯಿತು. ನಿಮ್ಮ ಹೊಸ ಮನೆಯನ್ನು ದೃಶ್ಯೀಕರಿಸಿ ನೋಡಿ ಯೋಜಿಸುವುದು ಬಹಳ ಮುಖ್ಯ. ಈ ಹಂತದಲ್ಲಿ ನಿಮ್ಮ ಜಾಣ್ಮೆ, ಕಲ್ಪನಾಶಕ್ತಿ ಎಲ್ಲ ಕೆಲಸಕ್ಕೆ ಬರುತ್ತದೆ. ಈ ಯೋಜನೆಯಲ್ಲಿ ಮನೆಯ ಎಲ್ಲರೂ ಭಾಗವಹಿಸಲಿ. ಇದು ಎಲ್ಲರ ಹಕ್ಕು ಮತ್ತು ಹೊಣೆ ಕೂಡ.

ಬಿಡುತ್ತಿರುವ ಮನೆ ಹೋಗುತ್ತಿರುವ ಮನೆ ಎರಡೂ ತದ್ರೂಪಿ ಇರುವ ಸಾಧ್ಯತೆ ತುಂಬಾ ಕಡಿಮೆ. ಆದ್ದರಿಂದ ಕೆಲವು ವಸ್ತುಗಳು ಈಗಿರುವ ರೀತಿಯ ಜಾಗಗಳಿಗೆ ಹೋಗಬಹುದು; ಇನ್ನು ಕೆಲವುಗಳ ಜೋಡಣೆಗೆ ಸ್ವಲ್ಪ ಪರದಾಡಬೇಕಾಗಬಹುದು.

ಈ ಮ್ಯಾಪಿಂಗ್ ಕೆಲಸ ಇಡೀ ಯೋಜನೆಗೆ ಒಂದು ವ್ಯವಸ್ಥಿತ ರೂಪವನ್ನು ಕೊಡುತ್ತದೆ. ಸಾಮಾನುಗಳನ್ನು ಹಾಳೆಯ ಮೇಲೆ ಎತ್ತಿ ಇಡುವುದು ಸುಲಭ. ಬೇಕಾದ ಬದಲಾವಣೆಯನ್ನು ಹಾಳೆಯ ಮೇಲೆ ಮಾಡಿಕೊಳ್ಳಿ. ವಸ್ತುವಿನ ಗುಡ್ಡ ಹೊಸ ಮನೆಗೆ ಹೋಗಿ ಬಿದ್ದ ಮೇಲೆ ನಿಮಗೆ ದಿಕ್ಕೇ ತೋರುವುದಿಲ್ಲ. ಆಗಿನ ಗೊಂದಲ, ದಣಿವುಗಳಿಂದಾಗಿ ನಿಮ್ಮಲ್ಲಿಯೇ ಜಗಳ ಆಗುವ ಸಂಭವ ಹೆಚ್ಚು. ಇನ್ನು ಉಳಿದಿರುವುದು ದೈಹಿಕ ಕೆಲಸ.

ಸಾಗಣೆಕಾರರು ಬರಬೇಕಾದ ದಿನವನ್ನು ಪರಸ್ಪರ ಮಾತನಾಡಿ ನಿಗದಿಪಡಿಸಿಕೊಳ್ಳಿ.

ನೀವು 2– 3 ದಿನಗಳಿಗಾಗಿ ದೂರದ ಊರಿಗೆ ಹೋಗಿ ಹೋಟಲ್ ರೂಮಿನಲ್ಲಿ ಇರುತ್ತೀರಿ ಎಂದು ಭಾವಿಸಿಕೊಳ್ಳಿ. ಆ ಪ್ರಕಾರ ಒಂದೆರಡು ಸೂಟ್‌ಕೇಸ್‌ನಲ್ಲಿ ನಿಮ್ಮ ಮನೆಯವರೆಲ್ಲರಿಗೂ ಬೇಕಾದ ದೈನಂದಿನ ಅಗತ್ಯದ ವಸ್ತುಗಳನ್ನು ತುಂಬಿಡಿ, ಇದನ್ನು ಪ್ರತ್ಯೇಕವಾಗಿ ಇಟ್ಟುಕೊಂಡಿರಿ. ಹೊಸ ಮನೆಗೆ ಹೋದ ಮೇಲೆ 2– 3 ದಿನ ಅಗತ್ಯವಸ್ತುಗಳಿಗಾಗಿ ಪರದಾಡುವ ಸಂಭವವನ್ನು ನಿವಾರಿಸಿಕೊಳ್ಳಿ.

## ಸಾಗಣೆಯ ಹಂತ

ಸಾಗಣೆಕಾರರು ಬಂದಾದ ಮೇಲೆ ಅವರು ಕೊಠಡಿಗೆ ಅನುಗುಣವಾಗಿ ಸಾಮಾನುಗಳನ್ನು ರಟ್ಟಿನ ಡಬ್ಬಗಳಲ್ಲಿ ತುಂಬಿಟ್ಟು ಡಬ್ಬದ ಮೇಲೆ ಹೆಸರನ್ನೋ, ಸಂಖ್ಯೆಯನ್ನೋ ಬರೆಯುತ್ತಾರೆ. ನಿಮ್ಮ ಕುಟುಂಬದ ಸದಸ್ಯರು ಯಾರಾದರೂ ಒಬ್ಬಿಬ್ಬರು ಅಲ್ಲೇ ಇದ್ದರೆ ತುಂಬಾ ಅನುಕೂಲ; ಯಾವ ಡಬ್ಬದಲ್ಲಿ ಏನಿದೆ ಎಂಬುದು ನಿಮಗೆ ಗೊತ್ತಿರುತ್ತದೆ. ಹೊಸಮನೆಯಲ್ಲಿ ಅದನ್ನು ತೆರೆಯುವಾಗ ಸುಲಭವಾಗುತ್ತದೆ.

ವಸ್ತು ಹೊಸ ಮನೆ ತಲುಪಿದ ನಂತರ ಸಾಗಣೆಕಾರರು ಡಬ್ಬಿಗಳನ್ನು ನೀವು ಹೇಳಿದ ರೂಮಿನಲ್ಲಿ ಇಡುತ್ತಾರೆ. ಯೋಜನಾಪೂರ್ವ ತಯಾರಿಯಲ್ಲಿ ನೀವು ಸಿದ್ಧಪಡಿಸಿಕೊಂಡಿರುವ ಮ್ಯಾಪಿಂಗ್ ಈಗ ಕೆಲಸಕ್ಕೆ ಬರುತ್ತದೆ.

ಪೂರ್ವ ತಯಾರಿಯೆಲ್ಲಾ ಸರಿಯಾಗಿದ್ದರೆ ಸಾಗಣೆಯ ಈ ಕೆಲಸ ಸಾಮಾನ್ಯವಾಗಿ ಒಂದು ದಿನದಲ್ಲಿ ಮುಗಿಯಬೇಕು. ದೊಡ್ಡ ಮನೆಯಾದರೆ, ಒಂದಕ್ಕಿಂತ ಜಾಸ್ತಿ ದಿನ ಬೇಕಾಗಬಹುದು. ಆದರೆ, ಮನೆಯ ಎಲ್ಲಾ ವಸ್ತುಗಳನ್ನು ಸಂಪೂರ್ಣ ಮನಕ್ಕೊಪ್ಪುವ ರೀತಿಯಲ್ಲಿ ಜೋಡಿಸಲು, ಹೊಸ ವ್ಯವಸ್ಥೆಗೆ ಒಗ್ಗಿಕೊಳ್ಳಲು ಹಲವು ದಿನ ಬೇಕಾಗಬಹುದು. ಅದಕ್ಕೆ ಹೇಳುವುದು ತಾಳಿದವರು ಬಾಳಿಯಾರು ಎಂದು.

## ಸಾಗಣೆಯ ನಂತರದ ಕೆಲಸ

ಇದೀಗ ಹೊಸ ವಿಳಾಸವನ್ನು ಎಲ್ಲ ಕಡೆ ತಿಳಿಸಿ ಅಪ್‌ಡೇಟ್ ಮಾಡುವ ಕೆಲಸ; ಇದೂ ಬಹಳ ಮಹತ್ವದ್ದು. ಪ್ರಮುಖವಾದವು ಎಂದರೆ ಬ್ಯಾಂಕ್ ಖಾತೆಗಳು, ಗ್ಯಾಸ್ ಸಂಪರ್ಕ, ವಿದ್ಯುತ್ ಸಂಪರ್ಕ, ಮನೆ ಫೋನ್, ಮೊಬೈಲ್ ಫೋನ್, ಕೇಬಲ್ ಟಿವಿ ಇತ್ಯಾದಿ. ಕೆಲವು ಕಡೆ ಹೊಸ ಸಂಪರ್ಕಗಳನ್ನೇ ಆಯಾ ಮನೆಯ ವಿಳಾಸಕ್ಕೆ ಪಡೆಯಬಹುದು.

ಹಾಲು, ವರ್ತಮಾನ ಪತ್ರಿಕೆಗಾಗಿ ಸಂಬಂಧಪಟ್ಟವರನ್ನು ಸಂಪರ್ಕಿಸಬೇಕು; ಈ ವಿಷಯದಲ್ಲಿ ನಿಮಗೆ ನೆರವು ನೀಡಲು ಸುಮಾರು ಜನ ತುದಿಗಾಲ ಮೇಲೆ ನಿಂತಿರುತ್ತಾರೆ, ನೀವು ನೆರವು ಕೇಳದಿದ್ದರೂ ಕೂಡ!

ನಿಮ್ಮ ಒಪ್ಪಂದದ ಪ್ರಕಾರ ನೀವು ಇದೀಗ ಬಿಟ್ಟುಬಂದಿರುವ ಮನೆಗೆ ಹೊಸ ಸುಣ್ಣ– ಬಣ್ಣ ಮಾಡಿಸಿ, ಸ್ವಚ್ಛಗೊಳಿಸಿ ಅಥವಾ ಏನಾದೂ ಹಾನಿ ಆಗಿದ್ದರೆ ಸರಿಪಡಿಸಿ ಬರಬೇಕಾಬಹುದು; ಅಥವಾ ಇದರ ವೆಚ್ಚ ಕೊಡಬೇಕಾಗಬಹುದು. ಇದಾದ ನಂತರ ಕೀಲಿ–ಕೈಗಳ ಹಸ್ತಾಂತರ.

ಮನೆ ಬದಲಾವಣೆ ಸುಗಮವಾಗಲೀ, ಹೊಸ ಮನೆ ನಿಮಗೆ ಶುಭಕರವಾಗಲಿ!

